ಜೋಡಿ ಅದ್ಭುತ ಎಂದು ಕಾಲೇಜಿನವರೆಲ್ಲಾ ಕೊಂಡಾಡಿದರಂತೆ. ಅದು ಸತ್ಯವಿರಬೇಕು ಎಂದು ಅವರಿಬ್ಬರೂ ನಂಬಿಕೊಂಡುಬಿಟ್ಟರು. ಕಾಲೇಜು ಮುಗಿದು ಅವನಿಗೆ ಒಳ್ಳೆಯ ಕೆಲಸ ಸಿಕ್ಕು, ಎರಡೂ ಮನೆಯವರಿಂದಲೂ ಯಾವುದೇ ಆಕ್ಷೇಪ ಇಲ್ಲದ ಕಾರಣ ಮದುವೆಯಾಗಿಬಿಟ್ಟರು. ಮೊದಲ ರಾತ್ರಿಯಿಂದಲೇ ಅವನಿಗೆ ಮದುವೆಯ ನಿಜವಾದ ಅರ್ಥ, ತನ್ನ ಪರಿಸ್ಥಿತಿ ಗೊತ್ತಾಗತೊಡಗಿ ಗಾಬರಿ, ಆತಂಕ ಮತ್ತು ಗೊಂದಲವಾಗತೊಡಗಿತು. ಯಾರ ಬಳಿ ಹೇಳಿಕೊಳ್ಳುವುದೋ ತಿಳಿಯದಾಗಿ ಹೋಯ್ತು. ಬದುಕಿನ ಸಂಕಷ್ಟಗಳು ಅಲ್ಲಿಂದಲೇ ಶುರುವಾದವು.

ಸುಡುಸುಡುವ ಯೌವನದಲ್ಲಿ ದೇಹವೊಂದು ಮತ್ತೊಂದು ದೇಹವನ್ನು ಕೂಡುವುದು ಅಷ್ಟೇನೂ ಕಷ್ಟವಲ್ಲ. ಜೀವಂತ ದೇಹದ ಮಾತು ಅಂತಿರಲಿ, ನಿರ್ಜೀವ ವಸ್ತುಗಳ ಸ್ಪರ್ಶವೂ ಯೌವನ ತುಂಬಿದ ಕಾಯದಲ್ಲಿ ಕಾಮತೃಷೆಯುಕ್ಕಿಸಬಲ್ಲವಾಗಿರುತ್ತವೆ. ಕಣ್ಣು ಮುಚ್ಚಿ ನಮ್ಮನ್ನು ಉನ್ಮಾದಿಸುವ ದೃಶ್ಯಗಳನ್ನು ನೆನಸಿಕೊಂಡರೆ ಸಾಕು, ದೇಹವು ಮಿಡಿಯತೊಡಗುತ್ತದೆ. ಆದ್ದರಿಂದ ಆರಂಭದಲ್ಲಿ ಆತನಿಗೆ ಪತ್ನಿಯೊಡನೆ ಸಂಭೋಗ ಏದುಸಿರು ತರಿಸಿದರೂ ಅಸಾಧ್ಯವಾಗಿರಲಿಲ್ಲ. ಆದರೆ ಅದು ನಿತ್ಯದ ಕಾಯಕವೆಂದು ತಿಳಿದಾಗ ಧೃತಿಗೆಡತೊಡಗಿದ. ತನಗೆ ಬೇಡದ ಇತರರ ಸ್ವರ್ಗವನ್ನು ಮನುಷ್ಯ ಹೆಚ್ಚುದಿನ ಅನುಭವಿಸಲಾರ.

ಆರಂಭದ ಮಿಲನದ ಫಲವಾಗಿ ಆಕೆ ಗರ್ಭವನ್ನೂ ಧರಿಸಿದಳು. ಇಡೀ ಬಂಧು-ಬಾಂಧವ ಸ್ನೇಹಿತರೆಲ್ಲರೂ ಸಂಭ್ರಮಿಸಿದರು. ಹೆರಿಗೆಗೆಂದು ಪತ್ನಿ ತವರಿಗೆ ಹೋದಾಗ, ಹುಲಿಯ ಬೋನಿನಿಂದ ಹೊರಬಿದ್ದಂತೆ ಇವನು ನಿರಾಳತೆಯನ್ನು ಅನುಭವಿಸಿದ. ಆರೆಂಟು ತಿಂಗಳು ಯಾವ ಒತ್ತಡವೂ ಇಲ್ಲದಂತೆ ಹಗುರವಾಗಿ ಬದುಕನ್ನು ನಡೆಸಿದ. ಮಗುವಿನ ಸಮೇತ ಆಕೆ ಮತ್ತೆ ಮನೆಗೆ ವಾಪಾಸಾದಾಗ, ಹೋದ ಪಿಶಾಚಿ ಮತ್ತೆ ಗವಾಕ್ಷಿಯಿಂದ ತೂರಿ ಬಂದಂತೆ ಆಗಿತ್ತು. ಈ ಬಾರಿ ಮಾತ್ರ ಏದುಸಿರಿನ ಕೂಡುವಿಕೆ ಸಾಧ್ಯವಾಗದೆ, ಅವನು ದೈನ್ಯನಾಗಿ ಅವಳ ಅನುಮತಿ ಪಡೆದು ಮತ್ತೊಂದು ಕೋಣೆಯಲ್ಲಿ ಮಲಗತೊಡಗಿದ. ಎಳೆಯ ಮಗುವಿನ ನೆಪವಂತೂ ಇದ್ದೇ ಇತ್ತು.

ವಿಪರೀತ ಪಾಪಪ್ರಜ್ಞೆಯಿಂದ ಅವನು ಬಳಲತೊಡಗಿದ. ಪತ್ನಿಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವುದು, ನಿತ್ಯದ ಮಾತುಕತೆಗಳನ್ನು ಆಡುವುದು ಅಸಾಧ್ಯವಾಯ್ತು. ಅವನ ವರ್ತನೆ ದೈನ್ಯತೆಗೆ ತಿರುಗಿಕೊಂಡಿತಲ್ಲದೆ ದಿನಗಳೆದಂತೆ ಕುಸಿಯತೊಡಗಿದ. ಆದರೆ ಪ್ರೀತಿಯನ್ನು ತುಂಬಿಕೊಂಡ ಜೀವ ಅವನದು. ಅದನ್ನು ತೋರಿಸಲು ಮತ್ತೊಂದು ಜೀವ ಬೇಕಿತ್ತು. ಅದಕ್ಕೆ ದಾರಿಯಾಗಿ ಮುದ್ದಾದ ಮಗಳು ಗೋಚರಿಸಿದಳು. ಆ ಮಗಳನ್ನು ಜೀವಕ್ಕಿಂತಲೂ ಹೆಚ್ಚು ಪ್ರೀತಿಸತೊಡಗಿದ. ತಾಯಿಯಾದವಳಿಗೆ ಹಾಲು ಉಣಿಸುವ ಕೆಲಸವೊಂದನ್ನು ಹೊರತುಪಡಿಸಿ ಮಿಕ್ಕೆಲ್ಲಾ ಜವಾಬ್ದಾರಿಯನ್ನು ತಾನೇ ತೆಗೆದುಕೊಂಡು ಬಿಟ್ಟ. ಅತ್ತಾಗ ರಮಿಸುವುದು, ನಿದ್ದೆ ಬಂದಾಗ ತೂಗುವುದು, ಮಧ್ಯರಾತ್ರಿಯಾದರೂ ಬೇಸರಿಸದೆ ಅಳುವ ಮಗುವನ್ನು ಹೊರಕ್ಕೆ ಎತ್ತಿಕೊಂಡು ಹೋಗುವುದು, ಅದರೊಡನೆ ಮಗುವಾಗಿ ಆಡುವುದು - ಎಲ್ಲವೂ ಅವನ ಬದುಕಿನ ಭಾಗವಾಗಿ ಬಿಟ್ಟವು. ಈಗಲೂ ಅಷ್ಟೇ, ಮಗುವಿನ ಯೋಗಕ್ಷೇಮವೇ ಅವನ ಜಗತ್ತು. ಅವಳನ್ನು ಶಾಲೆಗೆ ಕರೆದುಕೊಂಡು ಹೋಗುವುದು, ಊಟ ಮಾಡಿಸುವುದು, ಬಟ್ಟೆ ತೊಡಿಸುವುದು, ಹೊರಗೆ ಕರೆದುಕೊಂಡು ಹೋಗುವುದು, ಕೇಳಿದ್ದನ್ನು ಕೊಡಿಸುವುದು, ಕಥೆ ಹೇಳುವುದು - ಅವನ ಬದುಕಿನ ಮುಖ್ಯ ಭಾಗವಾಗಿ ಹೋಗಿದೆ. ತನ್ನಿಡೀ ಬದುಕಿನ ಭಾರವನ್ನು ಆ ಮಗುವಿನ ಯೋಗಕ್ಷೇಮದ ಮೇಲೆ ಹಾಕಿ ಬದುಕುತ್ತಿದ್ದಾನೆ.

'ನಿಮ್ಮ ಲೈಂಗಿಕತೆ ಸ್ಪಷ್ಟವಾದ ಮೇಲೆ ಮತ್ತೊಬ್ಬ ಗಂಡಿನ ಸಂಗವನ್ನು ಮಾಡಲಿಲ್ಲವೆ?' ಎಂದು ಕೇಳಿದೆ. ಇಂತಹ ಸಂದರ್ಭಗಳಲ್ಲಿ ಗಂಡಸರು ಸಾಮಾನ್ಯವಾಗಿ ವಿವಾಹಬಾಹಿರ ಸಂಬಂಧಗಳನ್ನು ಮುಂದುವರೆಸುತ್ತಾರೆ. ಹೆಂಡತಿ ತವರಿಗೆ ಹೋದಾಗಲೋ, ತಾವು ಕಚೇರಿಯ ಕೆಲಸದ ನಿಮಿತ್ತ ಪರವೂರಿಗೆ ಹೋದಾಗಲೋ, ತಮ್ಮ ಇಷ್ಟದ ಹುಡುಗನನ್ನು ತಾವಿದ್ದಲ್ಲಿಯೇ ಕರೆಸಿಕೊಂಡು ದೇಹದ ಸುಖವನ್ನು ಪೂರೈಸಿಕೊಂಡು ಸಂತೃಪ್ತರಾಗುತ್ತಾರೆ. ಆರಂಭದಲ್ಲಿ ತಮ್ಮ ಈ ಹಾದರದ ಬಗ್ಗೆ ಅಳುಕಿದ್ದರೂ, ಕೆಲವು ವರ್ಷಗಳಲ್ಲಿ ಇದೊಂದೇ ತಮಗಿರುವ ಆಯ್ಕೆ ಎಂದೆನಿಸಿ, ಅದರ ಬಗ್ಗೆ ಲಜ್ಜೆಯೂ ತಗ್ಗಿ ಹೋಗಿ